

## ವ್ಯವಹಾರಕ್ಕೆ ಮರಳಿದ ರಾಯರು

ಮಿಲಿಟರಿಯಲ್ಲಿದ್ದು ದೇಶ ಸೇವೆ ಮಾಡಿ ಬಂದವನು ನಾನು. ಸಮಾಜದಲ್ಲಿ ಆದರ್ಶವಾಗಿ ಬಾಳುವುದು ನನ್ನ ರಕ್ತದಲ್ಲೇ ಬಂದಿದೆ. ಹಾಗಿರುವಾಗ ಅವ್ನನ್ನು ನನ್ನ ಮನೇಲಿ ಇಟ್ಟುಕೊಳ್ಳಲು ನನಗೆ ಇರುಸುಮುರುಸಾಗಿತ್ತು. ಈಗ್ತಾನೆ ಮಾತನಾಡಿಸಿ ಹೋದ ಆ ನೆರೆಮನೆಯವನ ಆಲೋಚನೆಯೇ ನನ್ನದು ಕೂಡಾ ಆಗಿತ್ತು. ಅಪರಾಧಿಯನ್ನು ಮನೇಲಿ ಇಟ್ಟುಕೊಳ್ಳೋದು ಹೇಗೆ ಅಂತ ಚಿಂತೆಯಾಗಿತ್ತು. ಅಪರಾಧಿ ಪ್ರಜ್ಞೆಯಿಂದ ಬಳಲ್ತಾ ಇದ್ದೆ. ಆದ್ರೆ.. ನಿನ್ನ ಮಾತು ಕೇಳಿದೆ ಮೇಲೆ ನಿಜ ಅನ್ನಿಸ್ತು ಕಂದ. ಇಷ್ಟು ಚಿಕ್ಕವಳಾಗಿ ನಿನಗಿರುವ ವಿವೇಚನೆ ಈ ಮುದುಕರಿಗೆ ಇಲ್ಲದಂತಾಯಿತು.

ನಿಜ.. ತಪ್ಪು.. ಮಾಡಿದವನಿಗೆ ಪ್ರಾಯಶ್ಚಿತ್ತ ಅವಧಿ ಅಂತ ಇರಲೇಬೇಕು. ಸೂರ್ಯ ಚಿಕ್ಕ ವಯಸ್ಸಲ್ಲಿ ತಿಳೀದೇ ಮಾಡಿದ ತಪ್ಪು. ಅವ್ನು ಅಷ್ಟು ವರ್ಷಗಳ ಕಾಲ ಜೈಲಲ್ಲಿದ್ದು ಪ್ರಾಯಶ್ಚಿತ್ತ ಅನುಭವಿಸಿದ್ದಾನೆ. ನಾವೂ ಕೂಡಾ ಅವ್ನನ್ನು ದೂರ ಮಾಡಿ ಜೈಲಲ್ಲಿರುವಾಗ ನೋಡಲು ಹೋಗದೇ ತುಂಬಾ ಸಂಕಟ ಕೊಟ್ಟಿದ್ದೀವಿ. ಇಲ್ಲಿ ವಿಜಯನನ್ನೂ ಮಗನನ್ನೂ ದೂರ ಮಾಡಿ ನನ್ನ ಹಠ ಸಾಧಿಸಿ ಅವ್ನಿಗೂ ಮಾತೃ ವಾತ್ಸಲ್ಯದಿಂದ ವಂಚಿತಳನ್ನಾಗಿಸಿದೆ. ನನ್ಗೆ ನನ್ನ ಆದರ್ಶ, ಹಠ ಅದುವೇ ಹೆಚ್ಚಾಯಿತು. ಇಷ್ಟೊಂದು ಶಿಸ್ತಿನಿಂದ

ವಿಜಯಕುಮಾರಿ